ಸಂಖ್ಯೆ : ಇಎಸ್‌ಟಿ :          /2020

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
ಬಾಗಲಕೋಟ, ದಿನಾಂಕಃ 29-05-2020,
ದೂರವಾಣಿ : (08354) 236227

ಗೆ,

ಬಾಗಲಕೋಟ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲ ವಕೀಲರ ಸಂಘದ ಅಧ್ಯಕ್ಷರುಗಳಿಗೆ.

ಮಾನ್ಯರೇ,

ವಿಷಯ : ದಿನಾಂಕ: 01-06-2020 ರಿಂದ ಭೌತಿಕವಾಗಿ ಪ್ರಕರಣಗಳನ್ನು ದಾಖಲಿಬ್ಬಿಸುವ ವಕೀಲರು ಮುಂಚಿತವಾಗಿ ಅನುಮತಿ ಪಡೆದುಕೊಳ್ಳುವ ಕುರಿತು.

ಉಲ್ಲೇಖ: ಕರ್ನಾಟಕ ಘನ ಉಚ್ಚ ನ್ಯಾಯಾಲಯ, ಬೆಂಗಳೂರು ಇವರ ನೋಟಿಸು ದಿನಾಂಕ: 21-05-2020.

-ಖಖಂಖಖ-

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಈ ಮೂಲಕ ತಮಗೆ ತಿಳಿಸುವುದೇನೆಂದರೆ, ದಿನಾಂಕ: 01-06-2020 ರಿಂದ ಬಾಗಲಕೋಟ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಯಾವುದೇ ನ್ಯಾಯಾಲಯಗಳಲ್ಲಿ ಅಪರಾಧಿಕ ಮತ್ತು ದಿವಾಣಿ ಸ್ವರೂಪದ ಪ್ರಕರಣಗಳನ್ನು ಭೌತಿಕವಾಗಿ ದಾಖಲಿಬ್ಬಿಸುವ ಎಲ್ಲ ವಕೀಲರುಗಳು ಸದರೀ ಉದ್ದೇಶಕ್ಕಾಗಿಯೇ ಈ ಕಚೇರಿಯಿಂದ ಹೊಸದಾಗಿ ಸೃಷ್ಟಿಸಿದ ಮಿಂಚಂಚೆ **(e-mail)** ವಿಳಾಸಕ್ಕೆ ಮನವಿಯನ್ನು ಸಲ್ಲಿಸಿದಲ್ಲಿ ಅಂತಹ ವಕೀಲರುಗಳಿಗೆ ದಿನಾಂಕ ಮತ್ತು ಸಮಯ ನಿಗಧಿಪಡಿಸಿ ಅವರ ಮಿಂಚಂಚೆ ವಿಳಾಸ/ಚರವಾಣಿ ಸಂಖ್ಯೆಗೆ ಸಂದೇಶವನ್ನು ಈ ಕಚೇರಿಯಿಂದ ರವಾನಿಸಲಾಗುವುದು. ಸದರೀ ಸಂದೇಶದ ಪ್ರತಿಯನ್ನು ತಮ್ಮ ಜೊತೆಗೆ ತಂದಲ್ಲಿ ಮಾತ್ರ ಸಂಬಂಧಪಟ್ಟ ನ್ಯಾಯಾಲಯಗಳಲ್ಲಿ ತಮಗೆ ಭೌತಿಕವಾಗಿ ಪ್ರಕರಣವನ್ನು ದಾಖಲಿಸಲು ಅನುಮತಿಸಲಾಗುವುದು.

ದಿನಾಂಕ: 01-06-2020 ರಿಂದ ಈ ಮೇಲಿನ ಕಾರ್ಯವೈಖರಿಯನ್ನು ಎಲ್ಲ ವಕೀಲರ ಸಂಘದ ಸದಸ್ಯರು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

ಭೌತಿಕವಾಗಿ ಪ್ರಕರಣಗಳನ್ನು ದಾಖಲಿಬ್ಬಿಸುವ ವಕೀಲರುಗಳು ಉಪಯೋಗಿಸಬೇಕಾದ ಮಿಂಚಂಚೆ **(e-mail)** ವಿಳಾಸ :-

bgkpdjphfilingbgk@gmail.com

ತಮ್ಮ ವಿಶ್ವಾಸಿ,

ಸಹಿ/-
(ಕಲ್ಪನಾ ಎಂ. ಕುಲಕರ್ಣಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನಾಯಾಧೀಶರು
ಬಾಗಲಕೋಟ.